ಈ ಲೇಖನದ ವಿಷಯಾನುಕ್ರಮಣಿಕೆ


ದೇವರ ಪೂಜೆಯ ಮಾಹಾತ್ಮ್ಯ 2

ವಿಷ್ಣುಮಾಯೆಯನ್ನೇ ಗೆಲ್ಲುತ್ತೇವೆ 5

ಮಹಾಪಾತಕಗಳ ವಿನಾಶ 7

ಸಕಲಪ್ರಾಯಶ್ಚಿತ್ತಗಳ ಫಲ 10

ಎಂದಿಗೂ ನರಕವಿಲ್ಲ 12

ಸಕಲತೀರ್ಥಕ್ಷೇತ್ರಯಾತ್ರೆಯ ಪುಣ್ಯ 13

ಗಂಗೆಗಿಂತಲೂ ಮಿಗಿಲು ಹರಿಪಾದೋದಕ 15

# ದೇವರ ಪೂಜೆಯ ಮಾಹಾತ್ಮ್ಯ

ದೇವರ ಪೂಜೆ ಎಂಬ ಶಬ್ದದ ಅರ್ಥವೇನು ಮತ್ತು, ದೇವರ ಪೂಜೆಯನ್ನು ಯಾಕಾಗಿ ಮಾಡಬೇಕು ಎನ್ನುವದಕ್ಕೆ ಗೀತೆ ಮತ್ತು ಶ್ರೀಮದಾಚಾರ್ಯರು ನೀಡಿದ ಐದು ಕಾರಣಗಳನ್ನು ತಿಳಿದೆವು.

ದೇವರ ಪೂಜೆಯಿಂದ ಗಳಿಸುವ ಪುಣ್ಯ ಎಷ್ಟು ಎತ್ತರದ್ದು, ವೇದಗಳ ಅಭ್ಯಾಸ ಮತ್ತು ಶಾಸ್ತ್ರಗಳ ಅಧ್ಯಯನ ಇವೆರಡರ ಮಧ್ಯದಲ್ಲಿರುವ ಸಾಧನೆ ದೇವರ ಪೂಜೆ. ನಮ್ಮನಮ್ಮ ವೇದಶಾಖೆಗಳ ಅಧ್ಯಯನದಿಂದ ಕೋಟಿಪಟ್ಟು ಪುಣ್ಯವನ್ನು ಗಳಿಸಿದರೆ ಅದರ ಅನಂತಪಟ್ಟು ಪುಣ್ಯವನ್ನು ದೇವರ ಪೂಜೆಯಿಂದ ಗಳಿಸುತ್ತೇವೆ ಎನ್ನುವದನ್ನು ಹಿಂದಿನ ಲೇಖನದಲ್ಲಿ ಅರ್ಥ ಮಾಡಿಕೊಂಡೆವು.

ಈಗ ದೇವರ ಪೂಜೆಯ ಮಹಾಮಾಹಾತ್ಮ್ಯಗಳನ್ನು ತಿಳಿಯೋಣ.

ಮನುಷ್ಯ ತನಗೆ ಉಪಯೋಗವಿಲ್ಲ ಎಂತಾದಲ್ಲಿ ಕೂತಲ್ಲಿಂದ ಅಲ್ಲಾಡುವದಿಲ್ಲ ಸಹಿತ. ಹೀಗಾಗಿ ದೇವರ ಪೂಜೆಯಿಂದ ಉಂಟಾಗುವ ಮಹಾಪ್ರಯೋಜನಗಳನ್ನು ಶಾಸ್ತ್ರಗಳು ತಿಳಿಸುತ್ತವೆ.

**ಅದಕ್ಕಿಂತ ಮುಖ್ಯವಾಗಿ, ದೇವರ ಪೂಜೆಯಿಂದ ಉಂಟಾಗುವ ಪ್ರಯೋಜನಗಳನ್ನು ತಿಳಿದಲ್ಲಿ ಮನುಷ್ಯ ದೇವರ ಪೂಜೆಯ ಮಾಡದೇ ಉಳಿಯುವದಿಲ್ಲ. ಯಾವುದನ್ನು ಪಡೆಯಲು ಮನುಷ್ಯ ಹರಸಾಹಸ ಪಡಬೇಕೋ ಅಂತಹ ಎಲ್ಲವನ್ನೂ ಮನುಷ್ಯನಾದವನು ಭಗವಂತನ ಪೂಜೆಯಿಂದ ಪಡೆಯಬಲ್ಲ.**

ಮೊದಲಿಗೆ, ದೇವರ ಪೂಜೆಯಿಂದ ಉಂಟಾಗುವ ಪ್ರಯೋಜನಗಳನ್ನು ಇಷ್ಟೇ ಎಂದು ಪಟ್ಟಿ ಮಾಡಲಿಕ್ಕೆ ಸಾಧ್ಯವಿಲ್ಲ. ಏನು ಬೇಕೋ ಅದನ್ನು ಪಡೆಯಲು, ಕಡೆಗೆ ಮೋಕ್ಷವನ್ನೂ ಪಡೆಯಲೂ ನಮಗಿರುವ ಸರ್ವಶ್ರೇಷ್ಠ ಸಾಧನ, ಅದು ಭಗವಂತನ ಪೂಜೆ. ಹಿಂದಿನ ಲೇಖನಗಳಲ್ಲಿ ತಿಳಿದಂತೆ ನಮ್ಮ ಹಿಂದಿನ ಜನ್ಮಗಳ ಜ್ಞಾನದಿಂದ

ಹಿಡಿದು ಪರಮಾತ್ಮನ ಸಾಕ್ಷಾತ್ಕಾರದವರೆಗೆ, ಅನ್ನ, ವಸ್ತ್ರಗಳಿಂದ ಹಿಡಿದು ಮೋಕ್ಷದ ಶಾಶ್ವತ ಸುಖದವರೆಗೆ ಎಲ್ಲವನ್ನೂ ನಾವು ದೇವರಪೂಜೆಯಿಂದ ಪಡೆಯಬಹುದು.

## ವಿಷ್ಣುಮಾಯೆಯನ್ನೇ ಗೆಲ್ಲುತ್ತೇವೆ

ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಒಂದು ಮಹತ್ತ್ವದ ಮಾತನ್ನು ತಿಳಿಸುತ್ತಾನೆ —

**ದೈವೀ ಹ್ಯೇಷಾ ಗುಣಮಯೀ**
**ಮಮ ಮಾಯಾ ದುರತ್ಯಯಾ**
**ಮಾಮೇವ ಯೇ ಪ್ರಪದ್ಯಂತೇ**
**ಮಾಯಾಮೇತಾಂ ತರಂತಿ ತೇ**

ಭಗವಂತ ಪ್ರಕೃತಿಯ ಮೂಲಕ ನಮ್ಮೆಲ್ಲರನ್ನೂ ಬಂಧಿಸಿದ್ದಾನೆ. ಆ ಮಾಯೆಯಿಂದ ಹೊರಬರುವದೇ ಮುಕ್ತಿ. ಈ ಮಾಯೆಗೆ ಅಭಿಮಾನಿಯಾದವರು ಸ್ವಯಂ ಮಹಾಲಕ್ಷ್ಮೀದೇವಿ. ಅನಂತಬಲದ ಲಕ್ಷ್ಮೀದೇವಿಯರ ಈ ಬಂಧನವನ್ನು ಮೀರಲು ನಮಗೆಲ್ಲಿ ಶಕ್ತಿ? ಆದರೆ ಪರಮಾತ್ಮನನ್ನು ಆಶ್ರಯಿಸಿದಾಗ ಪರಮಾತ್ಮ ಈ ಮಾಯೆಯನ್ನು ನಮ್ಮಿಂದ ದಾಟಿಸುತ್ತಾನೆ.

ಪರಮಾತ್ಮನನ್ನು ಯಾವ ರೀತಿ ಆಶ್ರಯಿಸಬೇಕು? ಭಾಗವತದಲ್ಲಿ ಈ ಪ್ರಶ್ನೆಗೆ ಉತ್ತರ ನೀಡುತ್ತದೆ —

**ತ್ವಯೋಪಭುಕ್ತಸ್ರಗ್-ಗಂಧ-**
**ವಾಸೋಲಂಕಾರಚರ್ಚಿತಾಃ**
**ಉಚ್ಛಿಷ್ಟಭೋಜಿನೋ ದಾಸಾಃ**
**ತವ ಮಾಯಾಂ ಜಯೇಮಹಿ**

ಉದ್ಧವ ಶ್ರೀಕೃಷ್ಣನ ಮುಂದೆ ನಿವೇದಿಸಿಕೊಂಡ ಮಾತಿದು — ಸ್ವಾಮಿ, ನಿನಗರ್ಪಿತವಾದ ಹಾರ,ಗಂಧ, ಬಟ್ಟೆ ಮುಂತಾದ ಅಲಂಕಾರಗಳಿಂದ ನಮ್ಮ ದೇಹವನ್ನು ಅಲಂಕರಿಸಿ ನಿನಗರ್ಪಿತವಾದ ಅನ್ನವನ್ನೇ ಉಣ್ಣುವದರಿಂದ ನಿನ್ನ ಮಾಯೆಯನ್ನು ಗೆಲ್ಲುತ್ತೇವೆ.

ನಾವು ಬದುಕಲು ವಸ್ತ್ರಾದಿಗಳು ಬೇಕೇ ಬೇಕು. ಉಡುವ ವಸ್ತ್ರವಾಗಿರಲಿ, ಇರುವ ಮನೆಯಾಗಿರಲಿ ಎಲ್ಲವನ್ನೂ ಶ್ರೀಹರಿಗೆ ಸಮರ್ಪಿಸಿ ಅನುಭವಿಸಬೇಕು. ತಿನ್ನುವ ಪ್ರತಿಯೊಂದು ಪದಾರ್ಥವನ್ನೂ ಶ್ರೀಹರಿಗೆ ಅರ್ಪಿಸಿಯೇ ಉಣ್ಣಬೇಕು. ಶ್ರೀಹರಿಗೆ ಅರ್ಪಿಸುವದು ಎಂದರೆ ದೇವರ ಪೂಜೆ. ಅಂದರೆ ದೇವರ ಪೂಜೆಯನ್ನು ಮಾಡಿ ಪರಮಾತ್ಮನಿಗೆ ಸಮರ್ಪಿಸಿದ್ದನ್ನು ನಾವು ಸ್ವೀಕರಿಸಿದಲ್ಲಿ ಮುಕ್ತಿಯನ್ನು ಪಡೆಯಲು ಸಾಧ್ಯ.

## ಮಹಾಪಾತಕಗಳ ವಿನಾಶ

ನಮ್ಮ ಸಾಧನೆಯ ಮಾರ್ಗದಲ್ಲಿ ಅತೀ ದೊಡ್ಡ ಪ್ರತಿಬಂಧಕಗಳು, ಮುಳ್ಳುಗಳಂತೆ ನಮ್ಮನ್ನು ಮುಂದೆ ಸಾಗಲು ಬಿಡದ ಮಾರ್ಗಬಂಧಕಗಳು ನಾವು ಮಾಡಿದ ಪಾಪ.

ಒಂದು ಇರುವೆಯನ್ನು ಕೊಲ್ಲುವದರಿಂದ ಆರಂಭಿಸಿ ಭಗವಂತನ ನಿಂದೆಯವರಿಗಿನ ಸಕಲ ಪಾತಕಗಳನ್ನೂ ಉಲ್ಲೇಖಿಸಿ, ಆ ಪಾಪಗಳ ತಾರತಮ್ಯವನ್ನು ಶ್ರೀಮದಾಚಾರ್ಯರು ಭಾಗವತತಾತ್ಪರ್ಯನಿರ್ಣಯದಲ್ಲಿ ತಿಳಿಸುತ್ತ ಮನುಷ್ಯ ಪ್ರಾಯಶ್ಚಿತ್ತದಿಂದ ಪರಿಹಾರ ಮಾಡಿಕೊಳ್ಳಬಹುದಾದ ಪಾಪ ಎಂದರೆ ಬ್ರಹ್ಮಹತ್ಯೆಯವರೆಗೆ ಮಾತ್ರ ಎಂದು ತಿಳಿಸುತ್ತಾರೆ.

ಬ್ರಹ್ಮಹತ್ಯೆಗಿಂತ ಮಿಗಿಲಾದ ಪಾತಕಗಳಾದ ದೇವಸ್ವದ ಅಪಹರಣ, ದೇವನಿಂದೆ, ಶಾಸ್ತ್ರನಿಂದೆ, ದೇವತಾಸ್ತ್ರೀಯರನ್ನು ಕಾಮದ ಕಣ್ಣಿನಿಂದ ಕಾಣುವದು ಮುಂತಾದವುಗಳಿಗೆ ಪ್ರಾಯಶ್ಚಿತ್ತವೇ

ಇಲ್ಲ. ಅಂಧಂತಮಸ್ಸನ್ನೇ ನೀಡುವ ದುಷ್ಕರ್ಮಗಳವು ಎಂದು ಪ್ರತಿಪಾದಿಸುತ್ತಾರೆ.

ಈ ಬ್ರಹ್ಮಹತ್ಯೆಯವರೆಗಿನ ಏನು ಪಾಪಗಳಿವೆ ಅವುಗಳಿಗೆ ಶಾಸ್ತ್ರ ವಿಧಿಸಿರುವ ಪ್ರಾಯಶ್ಚಿತ್ತಗಳು ಅತೀಭಯಂಕರವಾಗಿವೆ.

ಆದರೆ ಪ್ರತೀನಿತ್ಯ ದೇವರ ಪೂಜೆಯನ್ನು ಮಾಡಿ[1] ದೇವರ ಪಾದೋದಕವನ್ನು ಅರ್ಥಾತ್ ತೀರ್ಥವನ್ನು ಸ್ವೀಕರಿಸುವದರಿಂದ ಮನುಷ್ಯ ಬ್ರಹ್ಮಹತ್ಯೆಯಿಂದಲೂ ಪಾರಾಗುತ್ತಾನೆ ಎಂದು ಸ್ವಯಂ ಶ್ರೀಮದಾಚಾರ್ಯರು ತಿಳಿಸುತ್ತಾರೆ —

> **ಸಾಲಗ್ರಾಮೋದ್ಭವೋ ದೇವೋ**
> **ದೇವೋ ದ್ವಾರಾವತೀಭವಃ**
> **ಉಭಯೋಃ ಸ್ನಾನತೋಯೇನ**
> **ಬ್ರಹ್ಮಹತ್ಯಾಂ ವ್ಯಪೋಹತಿ**

---

[1] ಬ್ರಹ್ಮಹತ್ಯೆ ಮಾಡಿದ ವ್ಯಕ್ತಿ ಮಾಡಿದ ಪೂಜೆಯಿಂದ ಮತ್ತೊಬ್ಬರು ತೀರ್ಥವನ್ನು ಸ್ವೀಕರಿಸುವಂತಿಲ್ಲ. ಆದರೆ, ಅವನು ತನಗಾಗಿ ಮಾತ್ರ ಪೂಜೆಯನ್ನು ಮಾಡಿ ಅವಶ್ಯವಾಗಿ ತೀರ್ಥವನ್ನು ಸ್ವೀಕರಿಸಬಹುದು. ಪ್ರಾಯಶ್ಚಿತ್ತಗಳ ಕುರಿತು ಬರೆಯುವಾಗ ಇದನ್ನು ವಿಸ್ತಾರವಾಗಿ ತಿಳಿಸಿ ಹೇಳುತ್ತೇನೆ.

ಸಾಲಗ್ರಾಮ ಮತ್ತು ಚಕ್ರಾಂಕಿತಗಳಿಗೆ ಅಭಿಷೇಕವನ್ನು ಮಾಡಿ ಆ ಅಭಿಷೇಕಜಲವನ್ನು ಸ್ವೀಕರಿಸುವದರಿಂದ ಬ್ರಹ್ಮಹತ್ಯೆಯ ಪಾತಕವೂ ವಿನಾಶವಾಗುತ್ತದೆ.

ಶ್ರೀ ಶ್ರೀಪಾದರಾಜಗುರುಸಾರ್ವಭೌಮರು ಶಂಖತೋಯದಿಂದ ಬ್ರಹ್ಮಹತ್ಯೆಯನ್ನು ಪರಿಹಾರ ಮಾಡಿದ ಅದ್ಭುತ ಘಟನೆಯನ್ನು ಶ್ರೀಮಚ್ಚಂದ್ರಿಕಾಚಾರ್ಯರು ತಮ್ಮ ಕೃತಿಗಳಲ್ಲಿ ದಾಖಲಿಸಿರುವದನ್ನು ನಾವು ಕಂಡೇ ಇದ್ದೇವೆ.

ಶಂಖೋದಕಕ್ಕೇ ಅಷ್ಟು ಮಾಹಾತ್ಮ್ಯವಿರುವಾಗ ಶ್ರೀಹರಿಯ ಪಾದೋದಕಕ್ಕೆ ಇನ್ನೆಷ್ಟು ಮಾಹಾತ್ಮ್ಯವಿರಬೇಡ?

## ಸಕಲಪ್ರಾಯಶ್ಚಿತ್ತಗಳ ಫಲ

ಪಾಪಗಳನ್ನು ಪರಿಹರಿಸಿಕೊಳ್ಳಬೇಕು ಎಂದರೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಹಿಂದೆ ತಿಳಿದಂತೆ ಪ್ರಾಯಶ್ಚಿತ್ತಗಳ ವಿಧಿಯನ್ನು ಕೇಳಿದರೇ ಮೈಯಲ್ಲಿ ನಡುಕವುಂಟಾಗುತ್ತದೆ. ಅಂತಹುದರಲ್ಲಿ ಕ್ಷುದ್ರಮಾನವರಾದ ನಮ್ಮಿಂದ ಅವು ದುಸ್ಸಾಧ್ಯವೇ ಸರಿ.

ಆದರೆ, ಕರುಣಾಳುವಾದ ಪರಮಾತ್ಮ ತನಗೆ ನಿವೇದಿತವಾದ ಅನ್ನವನ್ನುಣ್ಣುವದರಿಂದಲೇ ನಮಗೆ ಆ ಪ್ರಾಯಶ್ಚಿತ್ತಗಳ ಫಲವನ್ನು ನೀಡುತ್ತಾನೆ ಎಂದು ಶ್ರೀಮದಾಚಾರ್ಯರು ತಿಳಿಸುತ್ತಾರೆ —

**ಕೋಟ್ಯೈಂದವಸಹಸ್ರೈಸ್ತು**
**ಮಾಸೋಪೋಷಣಕೋಟಿಭಿಃ**
**ಯತ್ ಫಲಂ ಲಭ್ಯತೇ ಪುಂಭಿಃ**
**ವಿಷ್ಣೋರ್ನೈರ್ವೇದ್ಯಭಕ್ಷಣಾತ್**

ಐಂದವ ಎಂದರೆ ಚಾಂದ್ರಾಯಣ. ಪ್ರತಿಪದೆ ಒಂದು ತುತ್ತು, ದ್ವಿತೀಯಾ ಎರಡು, ಪಂಚಮಿ ಐದು, ಏಕಾದಶೀ ಉಪವಾಸ, ಪೌರ್ಣಿಮೆ ಹದಿನೈದು,

ಹಾಗೆ ಕೃಷ್ಣಪ್ರತಿಪದೆ ಹದಿನಾಲ್ಕು ಅಮಾವಾಸ್ಯೆ ಒಂದು. ಹೀಗೆ ಇಷ್ಟನ್ನು ಮಾತ್ರ ತಿಂದು ಬದುಕುವದು.

ಮಾಸೋಪೋಷಣ ಎಂದರೆ ಇಡಿಯ ತಿಂಗಳು ಉಪವಾಸ ಇರುವದು.

ಈ ಘೋರ ಪ್ರಾಯಶ್ಚಿತ್ತಗಳನ್ನು ನಮಗೆ ಪ್ರಾಯಃ ಮನಸ್ಸಿನಿಂದಲೂ ಮಾಡಲಿಕ್ಕೆ ಸಾಧ್ಯವಿಲ್ಲ. ಕಾರಣ, ನೆನೆಸಿಕೊಂಡೇ ಭೀತರಾಗುತ್ತೇವೆ.

ಶ್ರೀಹರಿಗೆ ಅರ್ಪಿಸಿದ್ದನ್ನು ಮಾತ್ರ ಉಣ್ಣುವ ನಿಯಮವನ್ನಿಟ್ಟುಕೊಂಡರೆ ಕೋಟಿ ಚಾಂದ್ರಾಯಣಗಳ, ಕೋಟಿ ಮಾಸೋಪವಾಸಗಳ ಫಲವನ್ನು ಪಡೆಯುತ್ತೇವೆ. ಕಾರಣ, ಶ್ರೀಹರಿಗೆ ಸಮರ್ಪಿಸಿದ ಒಂದು ತುತ್ತನ್ನು ತಿಂದರೂ ನೂರಾರು ಚಾಂದ್ರಾಯಣಗಳ ಫಲ ದೊರೆಯುತ್ತದೆ. ಇನ್ನು ದೇವರ ನೈವೇದ್ಯವನ್ನು ಬಿಟ್ಟು ಮತ್ತೇನನ್ನೂ ತಿನ್ನುವದಿಲ್ಲ ಎಂಬ ಮಹಾನಿಯಮವನ್ನು ಪಾಲಿಸಿದಲ್ಲಿ ಇಂತಹ ಮಹಾಫಲಗಳನ್ನು ಪಡೆಯುತ್ತೇವೆ.

# ಎಂದಿಗೂ ನರಕವಿಲ್ಲ

ದೇವರ ಪೂಜೆಯನ್ನು ಮಾಡದೇ ಬದುಕಿದಲ್ಲಿ ಇಡಿಯ ಆಯುಷ್ಯದಲ್ಲಿ ಪಾಪವನ್ನು ಮಾಡುತ್ತಲೇ ಇರುತ್ತೇವೆ ಎನ್ನುವದನ್ನು ಹಿಂದಿನ ಲೇಖನದಲ್ಲಿ ಗೀತೆಯ ಅ**ಘಾಯುರಿಂದ್ರಿಯಾರಾಮೋ** ಎಂಬ ಮಾತಿನಿಂದ ಅರ್ಥ ಮಾಡಿಕೊಂಡೆವು.

ದೇವರ ಪೂಜೆಯನ್ನು ಮಾಡುತ್ತಿದ್ದಾಗ ಮುಂದೆ ಪಾಪ ಮಾಡದೇ ಇರುವದಷ್ಟೇ ಅಲ್ಲ, ಹಿಂದೆ ಮಾಡಿದ ಪಾಪಗಳೂ ನಾಶವಾಗಿ ನರಕದಿಂದ ದೂರವಾಗುತ್ತೇವೆ ಎನ್ನುವ ಮಾತನ್ನು ಶ್ರೀಮದಾಚಾರ್ಯರು ತಿಳಿಸುತ್ತಾರೆ —

**ಸ್ವರ್ಚಿತೇ ಸರ್ವಲೋಕೇಶೇ**
**ಸುರಾಸುರನಮಸ್ಕೃತೇ ।**
**ಕೇಶವೇ ಕಂಸಶೇಶಿಘ್ನೇ**
**ನ ಯಾತಿ ನರಕಂ ನರಃ ।।**

ನರಕಲೋಕಗಳು ಇರುವ ಬಗೆ, ಅಲ್ಲಿರುವ ವಿಚಿತ್ರ ಭಯಾನಕ ಯಾತನೆಗಳು ಇವುಗಳನ್ನು

ಶಾಸ್ತ್ರದಿಂದ ತಿಳಿದಾಗ ಮೈಯಲ್ಲಿ ನಡುಕವೇ ಉಂಟಾಗುತ್ತದೆ.

ನಾವು ಮಾಡಿರುವ ಪಾಪಗಳಿಗೇನು  ಕಡಿಮೆಯಿಲ್ಲ ಹಾಗೂ ಎಂದು ಸಾಯುತ್ತೇವೆ ತಿಳಿದಿಲ್ಲ. ಇರುವಷ್ಟು ದಿವಸದಲ್ಲಿ ಶ್ರೀಹರಿಯ ಪೂಜೆಯನ್ನು ಭಕ್ತಿಯಿಂದ ಮಾಡಿದಲ್ಲಿ ನಿಶ್ಚಿತವಾಗಿ ನರಕದ ಭಯದಿಂದ ದೂರವಾಗುತ್ತೇವೆ. ಸತ್ತ ಬಳಿಕ ಉತ್ತಮ ಜನ್ಮಗಳನ್ನು ಪಡೆದು ಮತ್ತೆ ಸಾಧನೆಯ ಮಾರ್ಗದಲ್ಲಿ ಮುಂದುವರೆಯುತ್ತೇವೆ.

## ಸಕಲತೀರ್ಥಕ್ಷೇತ್ರಯಾತ್ರೆಯ ಪುಣ್ಯ

ತೀರ್ಥಯಾತ್ರೆ ಮನುಷ್ಯನ ಪಾಪಪರಿಹಾರಕ್ಕೆ ಮಹಾಸಾಧನ. ನಮ್ಮನ್ನು ನಮ್ಮ ಗುರುಗಳ ಸನ್ನಿಧಾನಕ್ಕೆ ಕರೆದೊಯ್ಯುವ ಸಾಧನ ಈ ತೀರ್ಥಯಾತ್ರೆ.

ಆದರೆ ಹಣವಿಲ್ಲದಿದ್ದಲ್ಲಿ, ದೇಹದಲ್ಲಿ ಶಕ್ತಿಯಿಲ್ಲದಿದ್ದಲ್ಲಿ, ಎರಡು ಇದ್ದರೂ ಸಮಯವಿಲ್ಲದಿದ್ದಲ್ಲಿ ತೀರ್ಥಯಾತ್ರೆ ಅಸಾಧ್ಯ.

ಇನ್ನು ಈ ಘೋರಕಲಿಯುಗದಲ್ಲಂತೂ ತೀರ್ಥಯಾತ್ರೆಗಾಗಿ ಹೋದರೂ ಅಲ್ಲಿ ಪಾಪಗಳನ್ನು ಕಳೆದುಕೊಳ್ಳುವದರಲಿ, ಅಲ್ಲಿಂದ ಪಾಪಗಳನ್ನೇ ಹೊತ್ತು ತರುತ್ತೇವೆ, ಅಷ್ಟು ನಮ್ಮ ಮನಸ್ಸು ಕಲುಷಿತ.

ಹೀಗಿದ್ದಾಗ ಸಾಧನೆಯೆಂತು ಎಂದು ಚಿಂತಿಸಿದರೆ ಆಚಾರ್ಯರು ಉತ್ತರ ನೀಡುತ್ತಾರೆ —

**ಗಂಗಾ ಗೋದಾವರೀ ರೇವಾ**
**ನದ್ಯೋ ಮುಕ್ತಿಪ್ರದಾಶ್ಚ ಯಾಃ ।**
**ನಿವಸಂತಿ ಸತೀರ್ಥಾಸ್ತಾಃ**
**ಸಾಲಗ್ರಾಮಶಿಲಾಜಲೇ ।।**

ಮುಕ್ತಿಯನ್ನು ನೀಡುವ ಗಂಗಾ, ಗೋದಾವರೀ, ನರ್ಮದಾ, (ನರ್ಮದೆಗೆ ರೇವಾ ಎಂದು ಹೆಸರು) ಮುಂತಾದ ಎಲ್ಲ ನದಿಗಳು ಸಾಲಿಗ್ರಾಮಕ್ಕೆ ಅಭಿಷೇಕ ಮಾಡಿದ ನೀರಿನಲ್ಲಿಯೇ ವಾಸ ಮಾಡುತ್ತವೆ.

ಅಂದರೆ ನಮ್ಮ ಮನೆಯ ಬಾವಿಯಿಂದ ನೀರು ತೆಗೆದು ಸಾಲಿಗ್ರಾಮಕ್ಕೆ ಅಭಿಷೇಕ ಮಾಡಿದಲ್ಲಿ ಆ ನೀರಿನಲ್ಲಿ ಸಕಲ ತೀರ್ಥಗಳ ಸನ್ನಿಧಾನವಿರುತ್ತದೆ. ಇಷ್ಟು ಕಾರುಣ್ಯ ತೋರುವ ಆ ಶ್ರೀಹರಿಯನ್ನು ಅರ್ಚಿಸದೇ ಇದ್ದಲ್ಲಿ ನಾವು ಅಘಾಯುಗಳಾಗುತ್ತೇವೆ ಎಂದು ಗೀತೆ ಕರೆಯುವದರಲ್ಲಿ ಆಶ್ಚರ್ಯವೇನಿದೆ?

## ಗಂಗೆಗಿಂತಲೂ ಮಿಗಿಲು ಹರಿಪಾದೋದಕ

ಶ್ರೀಮದಾಚಾರ್ಯರು ನದಿಗಳು ನೀಡುವ ಉಪವಾಸದ ಫಲವನ್ನು ಕೃಷ್ಣಾಮೃತಮಹಾರ್ಣವದಲ್ಲಿ ತಿಳಿಸುತ್ತ ವಿಷ್ಣುಪಾದೋದಕದ ಮಾಹಾತ್ಮ್ಯವನ್ನು ತಿಳಿಸುತ್ತಾರೆ —

> **ತ್ರಿರಾತ್ರಫಲದಾ ನದ್ಯೋ**
> **ಯಾಃ ಕಾಶ್ಚಿದಸಮುದ್ರಗಾಃ ।**
> **ಸಮುದ್ರಗಾಸ್ತು ಪಕ್ಷಸ್ಯ**
> **ಮಾಸಸ್ಯ ಸರಿತಾಂ ಪತಿಃ ।।**

**ಷಣ್ಮಾಸಫಲದಾ ಗೋದಾ**
**ವತ್ಸರಸ್ಯ ತು ಜಾಹ್ನವೀ|**
**ವಿಷ್ಣುಪಾದೋದಕಸ್ಯೈತೇ**
**ಕಲಾಂ ನಾರ್ಹಂತಿ ಷೋಡಶೀಮ್ ||**

**ಯಾನಿಕಾನಿ ಚ ತೀರ್ಥಾನಿ**
**ಬ್ರಹ್ಮಾಂಡಾಂತರ್ಗತಾನಿ ಚ |**
**ವಿಷ್ಣುಪಾದೋದಕಸ್ಯೈತೇ**
**ಕಲಾಂ ನಾರ್ಹಂತಿ ಷೋಡಶೀಮ್ ||**

ಸಮುದ್ರವನ್ನು ನೇರವಾಗಿ ಸೇರದೇ ನದಿಯನ್ನು ಸೇರಿ ಸಮುದ್ರವನ್ನು ಸೇರುವ ನದಿಗಳಿವೆಯಲ್ಲ, ಭವಾನೀ, ಕಪಿಲಾ ಮುಂತಾದವು, ಅವುಗಳಲ್ಲಿ ಸ್ನಾನವನ್ನು ಮಾಡಿದರೆ ಮೂರು ದಿನ ನಿರಂತರ ಉಪವಾಸದ ಫಲವನ್ನು ಪಡೆಯುತ್ತೇವೆ[2].

---

[2] ಈ ನಿಯಮ ತುಂಗಭದ್ರಾ, ಗಂಡಕೀ ಮುಂತಾದ ನದಿಗಳಿಗೆ ಅನ್ವಯಿಸುವದಿಲ್ಲ. ಸಮುದ್ರವನ್ನು ನೇರವಾಗಿ ಸೇರದ ಆ ನದಿಗಳಲ್ಲಿ ಸ್ನಾನ ಮಾಡಿದಲ್ಲಿ ಇನ್ನೂ ಹೆಚ್ಚಿನ ಪುಣ್ಯವನ್ನು ಗಳಿಸುತ್ತೇವೆ ಎಂದು ಶಾಸ್ತ್ರ ತಿಳಿಸುತ್ತದೆ. ಸಾಮಾನ್ಯವಾದ ನಿಯಮ ಮೇಲಿನದು.

ಸಮುದ್ರವನ್ನು ಸೇರುವ ನದಿಗಳು ಹದಿನೈದು ದಿವಸಗಳ ನಿರಂತರ ಉಪವಾಸದ ಫಲವನ್ನು ನೀಡುತ್ತವೆ.
ಸಮುದ್ರದಲ್ಲಿ ಒಂದು ಬಾರಿ ಸ್ನಾನ ಮಾಡಿದರೆ ಒಂದು ತಿಂಗಳ ಉಪವಾಸದ ಫಲವನ್ನು ಪಡೆಯುತ್ತೇವೆ.

ಕಾವೇರೀಸ್ನಾನ ಮೂರು ತಿಂಗಳ ನಿರಂತರ ಉಪವಾಸದ ಫಲವನ್ನು ನೀಡುತ್ತದೆ.

ಗೋದಾವರೀ ಸ್ನಾನ ಆರು ತಿಂಗಳ ಫಲವನ್ನು ನೀಡುತ್ತದೆ.

ಒಂದು ಬಾರಿ ಗಂಗೆಯಲ್ಲಿ ಸ್ನಾನ ಮಾಡಿದರೆ ಒಂದು ವರ್ಷ ನಿರಂತರ ಉಪವಾಸ ಮಾಡಿದ ಫಲ ಪಡೆಯುತ್ತೇವೆ.

ಆದರೆ ಈ ಭರತಭೂಮಿಯ ನದಿಗಳಷ್ಟೇ ಅಲ್ಲ, ಸತ್ಯಲೋಕದಿಂದ ಆರಂಭಿಸಿ ಪಾತಾಳದವರೆಗಿನ ಲೋಕಗಳಲ್ಲಿ ಎಷ್ಟೆಲ್ಲ ತೀರ್ಥಗಳಿವೆಯೋ ಅಷ್ಟೂ ತೀರ್ಥಗಳು ನಾವು ಮನೆಯಲ್ಲಿ ಸಾಲಿಗ್ರಾಮಕ್ಕೆ

ಅಭಿಷೇಕ ಮಾಡಿ ಪಡೆಯುವ ತೀರ್ಥಕ್ಕೆ ಸಮ ಅಲ್ಲ ಎನ್ನುತ್ತಾರೆ ಶ್ರೀಮದಾಚಾರ್ಯರು.

ಕಾರಣ, ಶ್ರೀಹರಿಯ ಪಾದೋದಕವನ್ನು ಒಮ್ಮೆ ಪಾನ ಮಾಡಿದರೆ ಹನ್ನೆರಡು ವರ್ಷಗಳ ಕಾಲ ನಿರಂತರವಾಗಿ ಉಪವಾಸ ಮಾಡಿದ ಫಲವನ್ನು ಪಡೆಯುತ್ತೇವೆ.

ದಿವಸಕ್ಕೆ ಮೂರು ಬಾರಿ ನಿರ್ಮಾಲ್ಯ ತೀರ್ಥ, ಮೂರು ಬಾರಿ ತೀರ್ಥ, ಬೆಳಿಗ್ಗೆ ರಾತ್ರಿ ಊಟದ ಮುಂಚೆ ಮತ್ತು ನಂತರ ಹೀಗೆ ಒಟ್ಟು ಹತ್ತು ಬಾರಿ ತೀರ್ಥವನ್ನು ನಾವು ಸ್ವೀಕರಿಸುತ್ತೇವೆ. ಅಂದರೆ ಒಂದು ದಿವಸದಲ್ಲಿ 120 ವರ್ಷಗಳ ಅರ್ಥಾತ್ ಸಮಗ್ರ ಮನುಷ್ಯರ ಆಯುಷ್ಯದಲ್ಲಿ ಉಪವಾಸ ಮಾಡಿದ ಪುಣ್ಯ ಒಂದೇ ದಿವಸದಲ್ಲಿ.

ಇಂತಹ ಕಾರುಣ್ಯ ಯಾರಲ್ಲಿ ಕಾಣಲು ಸಾಧ್ಯ? ನಮ್ಮ ಅಂತರ್ಯಾಮಿಯಲ್ಲಿ ಹೊರತುಪಡಿಸಿ.

ಈ ತತ್ವವನ್ನು ಕೇವಲ ಗ್ರಂಥಸ್ಥಗೊಳಿಸಿದ್ದಷ್ಟೇ ಅಲ್ಲ, ಸ್ವಯಂ ಶ್ರೀಮದಾಚಾರ್ಯರು ನಿರ್ಮಾಲ್ಯತೀರ್ಥವನ್ನು ಸ್ವೀಕರಿಸಬೇಕಾದರೆ ಈ

ತತ್ವವನ್ನು ಅನುಸಂಧಾನ ಮಾಡಿಯೇ ಸ್ವೀಕರಿಸುತ್ತಿದ್ದರು ಎಂದು ಮಧ್ವವಿಜಯದಲ್ಲಿ ಶ್ರೀ ನಾರಾಯಣಪಂಡಿತಾಚಾರ್ಯರು ತಿಳಿಸುತ್ತಾರೆ —

**ಅಭಿದಧತಿ ಮುನೀಂದ್ರಾಃ ದ್ವಾದಶಾಬ್ದೋಪವಾಸ-**
**ಪ್ರತಿಮಫಲಮಲಂ ಯತ್ಸೇವನಂ ಭಕ್ತಿಯುಕ್ತಮ್ ।**
**ಅಧಿಕಮಮರನದ್ಯಾದ್ಯಾಪ್ಲವಾದ್ಧನ್ಯಮಾನ್ಯಾತ್**
**ಅಪಿಪದಲವಬೋಧೋ ವಿಷ್ಣುಪಾದೋದಕಂ ತತ್ ।**

ಕೈಯಲ್ಲಿ ವಿಷ್ಣುಪಾದೋದಕವನ್ನು ಹಿಡಿದು ಪ್ರಾಶನ ಮಾಡುವದಕ್ಕಿಂತ ಮುಂಚೆ ಇದು ಹನ್ನೆರಡು ವರ್ಷದ ಫಲವನ್ನು ನೀಡುವ ಪಾದೋದಕ, ಗಂಗಾದಿತೀರ್ಥಗಳಲ್ಲಿ ಮಾಡುವ ಸ್ನಾನಕ್ಕಿಂತಲೂ ಮಿಗಿಲಾದ ಫಲವನ್ನು ನೀಡುವ ಪಾದೋದಕ ಎಂದು ಚಿಂತಿಸಿ ಭಕ್ತಿಯಿಂದ ಆಚಾರ್ಯರು ಸ್ವೀಕರಿಸುತ್ತಿದ್ದರು.

ಈಗ ಹೇಳಿ ಒಂದು ದಿವಸಕ್ಕೆ 120 ವರ್ಷದ ಉಪವಾಸದ ಫಲವನ್ನು ನೀಡುವ ಈ ಪಾದೋದಕವನ್ನು ಪಡೆಯಲು ನಾವು ದೇವರ ಪೂಜೆ ಮಾಡಬೇಕೆ, ಬೇಡವೇ ಎಂದು.

ಹೀಗೆ ನಮ್ಮ ಲೌಕಿಕ ಬದುಕಿನ ಎಲ್ಲ ದುಃಖಗಳಿಗೂ ನಮ್ಮ ಪಾಪಗಳೇ ಕಾರಣ. ದೇವರ ಪೂಜೆಯನ್ನು ಮಾಡುವದರಿಂದ ಪಾಪಗಳ ನಾಶವನ್ನೇ ಮಾಡಿಕೊಳ್ಳಬಹುದು. ಅನುಭವಿಸಲೇ ಬೇಕಾದ ಪಾಪಗಳ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳಬಹುದು. ಆದರೆ ದೇವರ ಪೂಜೆಯನ್ನು ಮಾಡದೇ ಇದ್ದಲ್ಲಿ ಪಾಪಗಳೂ ತಗ್ಗುವದಿಲ್ಲ. ಪಾಪಗಳ ತೀವ್ರತೆಯೂ ಕಡಿಮೆಯಾಗುವದಿಲ್ಲ.

ನಮ್ಮ ಪಾಪ ಪರಿಹಾರ್ಯವಾಗಿದ್ದರೆ ಆ ಪಾಪವನ್ನು ದೇವರ ಪೂಜೆ ಸುಟ್ಟು ಭಸ್ಮ ಮಾಡಿಬಿಡುತ್ತದೆ. ಅಪರಿಹಾರ್ಯವಾದ ರೀತಿಯಲ್ಲಿ ನಾವು ಪಾಪ ಮಾಡಿದ್ದರೆ ಆ ಪಾಪದ ಫಲವಾದ ದುಃಖವನ್ನು ಅನುಭವಿಸಬೇಕಾದರೆ ನಮಗೆ ದೇವರ ಪೂಜೆ ಶಕ್ತಿಯನ್ನು ನೀಡುತ್ತದೆ, ಮತ್ತೊಮ್ಮೆ ಪಾಪ ಮಾಡಬಾರದು ಎಂಬ ಎಚ್ಚರವನ್ನು ನೀಡುತ್ತದೆ.

ಹೀಗೆ ಪಾಪಗಳನ್ನು ಪರಿಹರಿಸಿ, ದುಃಖವನ್ನು ಎದುರಿಸಲೇಬೇಕಾದಾಗ ಅದ್ಭುತವಾದ ಧೈರ್ಯವನ್ನು ನಮಗೆ ನೀಡಿ, ಸಂಸಾರದಿಂದಲೇ

ನಮ್ಮನ್ನು ಉದ್ಧರಿಸುವ ಶ್ರೇಷ್ಠಸಾಧನ ನಾವು ಮಾಡುವ ದೇವರ ಪೂಜೆ.

ಆ ಪೂಜೆಯನ್ನು ಸದಾ ಮಾಡುವ ಸೌಭಾಗ್ಯ ನಮ್ಮದಾಗಲಿ ಎಂದು ಗುರ್ವಂತರ್ಯಾಮಿಯನ್ನು ಪ್ರಾರ್ಥಿಸೋಣ.

ದೇವರ ಪೂಜೆಯ ಕುರಿತು ಶ್ರೀಮದಾಚಾರ್ಯರು ತಿಳಿಸಿರುವ ಮತ್ತಷ್ಟು ಪ್ರಯೋಜನಗಳ ಕುರಿತು ಮುಂದಿನ ಲೇಖನದಲ್ಲಿ ತಿಳಿಯೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491